**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

ಸಾಕ್ಷಿಗೆ ದಿನಾಂಕಃ 01-04-2025 ರಂದು ಪ್ರಮಾಣ ವಚನ ಬೋಧಿಸಲಾಯಿತು

C.C.No. 2427/2024

DW-1

| | | |
|---|---|---|
| ಸಾಕ್ಷಿದಾರರ ಹೆಸರು | - | ಬಾಳಪ್ಪಾ ಶಿವಪ್ಪಾ ಹುಲಕುಂದ |
| ವಯಸ್ಸು | - | 40 ವರ್ಷ |
| ಉದ್ಯೋಗ | - | ಕೂಲಿ ಕೆಲಸ |
| ಸಾಕೀನ | - | ತುಕ್ಕಾನಟ್ಟಿ, ತಾಃ ಮೂಡಲಗಿ |

**ಮುಖ್ಯ ವಿಚಾರಣೆ: ಆರೋಪಿ ಪರ ವಕೀಲರಿಂದ:**

1) ಪಿರ್ಯಾದುದಾರರು ಯಾರೆಂಬುವುದು ನನಗೆ ಗೊತ್ತಿಲ್ಲ. ಈ ನ್ಯಾಯಾಲಯದಿಂದ ನೋಟಿಸು ನನಗೆ ಬಂದ ನಂತರ ಈ ಕೇಸಿನ ಬಗ್ಗೆ ಗೊತ್ತಾಗಿರುತ್ತದೆ. ಪಿರ್ಯಾದುದಾರರು ಕಡೆಯಿಂದ ನಾನು ಯಾವುದೇ ಸಾಲ ಪಡೆದುಕೊಂಡಿಲ್ಲ. ನಾನು ಕಲ್ಲೋಳ್ಳಿ ಗ್ರಾಮದ ಶಂಕರಗೌಡ ಪಾಟೀಲ ರವರ ಜಮೀನನ್ನು ಲಾವಣಿ ರೂಪದಲ್ಲಿ ಮಾಡಿದ್ದೆ. ಆಗ ಶಂಕರಗೌಡ ಪಾಟೀಲ ರವರು ನನ್ನ ಕಡೆಯಿಂದ ಭದ್ರತೆಗಾಗಿ ಈ ಪ್ರಕರಣದ ಖಾಲಿ ಚೆಕ್ಕಿನ ಮೇಲೆ ನನ್ನ ಸಹಿ ಪಡೆದುಕೊಂಡಿದ್ದರು.

2) ದೂರಿನಲ್ಲಿ ತಿಳಿಸಿದಂತೆ ನಾನು ಪಿರ್ಯಾದುದಾರರ ಕಡೆಯಿಂದ ರೂ. 4,00,000/- ಸಾಲವನ್ನು ಪಡೆದುಕೊಂಡಿರುವುದಿಲ್ಲ. ಶಂಕರಗೌಡ ಪಾಟೀಲ, ಸಾಃ ಕಲ್ಲೋಳ್ಳಿರವರು ನನ್ನ ಈ ಪ್ರಕರಣದ ಖಾಲಿ ಚೆಕ್ಕನ್ನು ಪಿರ್ಯಾದುದಾರರಿಗೆ ನೀಡಿ ನನ್ನ ವಿರುದ್ಧ ಇದೊಂದು ಸುಳ್ಳು ಕೇಸು ಹಾಕಿರುತ್ತಾರೆ. ಈ ಪ್ರಕರಣದ ಪಿರ್ಯಾದುದಾರರು ಸಹ

ಶಂಕರಗೌಡ ಪಾಟೀಲ, ಸಾಃ ಕಲ್ಲೋಳ್ಳಿ ರವರ ಜಮೀನನ್ನು ಲಾವಣಿ ಮಾಡುತ್ತಿದ್ದು ಪಿರ್ಯಾದುದಾರರು ಮತ್ತು ಶಂಕರಗೌಡ ಪಾಟೀಲ ರವರು ಒಬ್ಬರಿಗೊಬ್ಬರು ಪರಿಚಯಸ್ಥರಿದ್ದು ನನ್ನಿಂದ ಅಕ್ರಮವಾಗಿ ಹಣ ಪಡೆಯುದಕ್ಕಾಗಿ ಇದೊಂದು ಸುಳ್ಳು ಕೇಸು ಹಾಕಿರುತ್ತಾರೆ. ಹೀಗಾಗಿ ಪಿರ್ಯಾದುದಾರರು ಸಲ್ಲಿಸಿರುವ ಈ ದೂರನ್ನು ವಜಾಗೊಳಿಸಲು ವಿನಂತಿ.

**ಪಾಟೀ ಸವಾಲುಃ** ಪಿರ್ಯಾದುದಾರರ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.